254

ಫಾರೆಸ್ಟ್ ಇಲಾಖಾ.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 27ನೇ ಮಾರ್ಚಿ 1890.

ಇದರಿಂದ ಪ್ರಕಟನಲ್ಪಡುದೇನಂದರೆ, ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿ ಆದ ಬಾಬತು ಇದರ ಆಡಿ ಕಂಡ ಚವ್ವುಟೀನೆಗಳು ಕೆಳಗೆ ಕಾಣಿಸಿರುವ ತಾರೀಖು ವ ಸ್ಥಳಗಳಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತದೆ.

ಹರಾಜು ನಡಿಯತಕ್ಕ ಸ್ಥಳದ ಹೆಸರು	ಹರಾಜು ತಾರೀಖು.	ಸಾಗವಾನಿ ನಾಟುಗಳು.	ಕಾಡುಜಾತಿ ನಾಟುಗಳು.	ಸಾಗವಾನಿ ಮತ್ತು ಕಾಡು ಜಾತಿಮರಗಳು	ಸಾಗವಾನಿ ತುಂಡುಗಳು.	ಷರಾ.
ಚಿಕ್ಕೇನಹಳ್ಳಿ ಮತ್ತು ಕುಂಚನಹಳ್ಳಿ	10ನೇ ಏಪ್ರೆಲ್	..	..	..	5000	ಖರೀದಿದಾರ್ರುಗಳು ತಾವುಗಳು ಉಸ್ತುವಾರಿ ನೋಡಿಕೊಳ್ಳಬೇಕು.
ಚೋರನಯಡಿಹಳ್ಳಿ ..	12ನೇ ಡಿಟೋ	..	..	..	2000	
ಕಾರಿಪುರ ..	15ನೇ ಡಿಟೋ	..	..	100	..	
ಸಿರಾಳಕೊಪ್ಪ ..	17ನೇ ಡಿಟೋ	..	20	100	..	
ಚನ್ನಗಿರಿ ..	22ನೇ ಡಿಟೋ	50	24	100	..	
ಉಬ್ರಾಣಿ ..	24ನೇ ಡಿಟೋ	..	..	400	..	

ಹರಾಜಿನ ಷರತ್ತುಗಳು—ಡಿಪೋ ನಾಟುಗಳು ಮತ್ತು ಮರಗಳ ವಿಷಯದಲ್ಲಿ 1887ನೇ ಇಸವಿ ಅಗಸ್ಟ್ 30ನೇ ತಾರೀಖಿನ 99ನೇ ನಂ. ನೋಟಿಫಿಕೇಷನ್ ನೋಡತಕ್ಕದ್ದು. ಫಾರೆಸ್ಟಿನಲ್ಲಿರುವ ಕಾರಣಿಂಗ್ ತುಂಡುಗಳ ವಿಷಯದಲ್ಲಿ ಮೊಬಿಲಗನ್ನು ನಗದಾಗಿ ಹರಾಜು ತಾರೀಖು ಲಾಗಾಯತು 3 ದಿವಸಗಳಲ್ಲಿ ಪಾವತಿ ಮಾಡಬೇಕು. ಇದಕ್ಕೆ ತಪ್ಪಿದರೆ ಅವಲ್ ಖರೀದಿದಾರ್ರ ಆವಗುಣಕ್ಕೆ ಸಾಮಾನು ಪುನ್ಹಾ ಹರಾಜು ಮಾಡಲ್ಪಡುವದು. ಪೂರಾ ಸಾಮಾನನ್ನು ಹರಾಜು ತಾರೀಖು 10 ದಿನಗಳಲ್ಲಿ ಸಾಗಿಸಿಕೊಂಡು ಹೋಗಬೇಕು.

ನೋಟಿಫಿಕೇಷನ್.

ತಾರೀಖು 11ನೇ ಮಾರ್ಚಿ 1890ನೇ ಇಸವಿ.

ಇದರಿಂದ ಫಾಯಿಷ್ ಮಾಡುವದೇನಂದರೆ, ಸಾಗರ ತಾಲ್ಲೂಕು ಭಾರಂಗಿ ಶೇಕದಾರ್ರಿಗೆ ಸರಕಾರದ ಉಪಯೋಗಕ್ಕಾಗಿ ಕೊಟ್ಟಿದ್ದ "F" ಅಕ್ಷರವುಳ್ಳ ನಂಬರ್ ಇಲ್ಲದ ಫಾರೆಸ್ಟ್ ಠಸ್ಸೆ ಮುದ್ರೆಯು ಸದರೀ ಶೇಕದಾರ್ ವಾಸಮಾಡುತ್ತಿದ್ದ ಗುಂಡು ಮನೆ ನರಸಪ್ಪನ ಮನೆ ಅಕಸ್ಮಾತ್ತಾಗಿ ಬೆಂಕಿಯಿಂದ ಸುಟ್ಟು ಕಾಲದಲ್ಲಿ ಸುಟ್ಟು ಅಥವಾ ಗೈರ್‌ವಿಲೆ ಆಗಿರುತ್ತೆಂದು ತಿಳಿಯಬಂದಿರುವದ್ದರಿಂದ ಅದಕ್ಕೆ ಬದಲಾಗಿ ಹೊಸ ಮುದ್ರೆಯು ಕೊಡಲ್ಪಟ್ಟಿರುತ್ತೆ.

ತಾರೀಖು 17ನೇ ಮಾರ್ಚಿ 1890.

ಇದರಿಂದ ಫಾಯಿಷ್ ಮಾಡುವದೇನಂದರೆ, ಸಾಗರ ತಾಲ್ಲೂಕು ಕಾರೂರು ಮಾಗಣಿ ಶೇಕದಾರ್ ಚಿನ್ನದ ಹೊಳೇ ದಾಟುವ ವೇಳೆ ನಂಬರ್ ಯಿಲ್ಲದ F ಯೆಂದು ಗುರ್ತುವುಳ್ಳ ಠಸ್ಸೆ ಮೊಹರ್ ಕಳಕೊಂಡಹಾಗೆ ತಿಳಿದು ಬಂದು ಯಿರುವದ್ದರಿಂದ ಅದಕ್ಕೆ ಬದಲಾಗಿ ಬೇರೆ ಬಂದು ಹೊಸ ಮೊಹರ್ ಕೊಡಲ್ಪಟ್ಟಿರುತ್ತೆ.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.